# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.559-2017** **ಡಿ . ಡಬ್ಲು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರಂಗಶೆಟ್ಟಿ<br>ಕಾರೆಮೋಳೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 21-02-2025. |

**<u>ಪಾಟೀ ಸವಾಲು: ವಾದಿಗಳ ಪರ ಶ್ರೀ ಪಿ.ಎಂ ವಕೀಲರಿಂದ:</u>**

ನನ್ನ ತಂದೆಯವರ ಹೆಸರು ಹನುಮಂತಶೆಟ್ಟಿ, ನನ್ನ ತಂದೆಯವರಿಗೆ 5 ಜನ ಮಕ್ಕಳು ಇದ್ದು, ಅವರುಗಳೆಂದರೆ ರಂಗಶೆಟ್ಟಿ ಆದ ನಾನು, ಹನುಮಂತಶೆಟ್ಟಿ ಲಕ್ಷ್ಮಣಶೆಟ್ಟಿ, ರಾಮಶೆಟ್ಟಿ ಹಾಗೂ ಸಣ್ಣಶೆಟ್ಟಿ ರವರುಗಳಾಗಿರುತ್ತೇವೆ. ನನ್ನ ತಂದೆಯವರಿಗೆ ಸೇರಿದ ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಇರಲಿಲ್ಲ. ನನ್ನ ತಂದೆಯವರಿಗೆ ಸೇರಿದ ಒಂದು ಮನೆ ಇತ್ತು. ಸದರಿ ಮನೆಯಲ್ಲಿ ನಾನು ಮತ್ತು ನನ್ನ ಸಹೋದರರು ಮದುವೆ ಆಗುವವರೆವಿಗೂ ಜೊತೆಯಲ್ಲಿ ಇದ್ದೆವು. ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನನ್ನ ತಂದೆಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನಗೆ 25 ವರ್ಷಕ್ಕೆ ಮದುವೆ ಮಾಡಿರುತ್ತಾರೆ. ನಾನು ಮದುವೆಯಾದ ನಂತರ ನಾನು ಕೇವಲ ಒಂದು ವರ್ಷಗಳ ಕಾಲ ನನ್ನ ತಂದೆಯವರ ಜೊತೆ ಇದ್ದೆನು. ದಾವಾ ಷೆಡ್ಯೂಲ್ ಸ್ವತ್ತನ್ನು ನನ್ನ ಕುಟುಂಬದ ದರ್ದಿಗಾಗಿ ಯಾರಿಗೂ

ಭೋಗ್ಯ ಮಾಡಿರುವುದಿಲ್ಲ, ಆದರೆ ಪಿ.ಎಲ್.ಡಿ.ಸಿ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತೇನೆ. ದಾವಾ ಷೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದಂತಹ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ.

2. ನನ್ನ ಕುಟುಂಬದ ದರ್ದಿಗಾಗಿ ನಾನು ಮತ್ತು ನನ್ನ ಸಹೋದರರು 1986 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತನ್ನು ಭೋಗ್ಯ ಮಾಡಿದ್ದೆವು ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯೂ ಕಾರೆಮೋಳೆ ಗ್ರಾಮದಲ್ಲಿ ಇರುತ್ತದೆ. ನನ್ನ ಮತದಾರರ ಗುರುತಿನ ಚೀಟಿಯೂ ನನಗೆ ಮತದಾನದ ಹಕ್ಕು ಬಂದಾಗಿನಿಂದಲೂ ಸಹ ಕಾರೆಮೋಳೆ ವಿಳಾಸದಲ್ಲಿಯೇ ಇರುತ್ತದೆ ಎಂದರೆ ಸರಿ. ನನ್ನ ಸಹೋದರರು ಸಹ ಮದುವೆಯಾದ ನಂತರ ಬೇರೆ ಆಗಿರುತ್ತಾರೆ.

3. ನಾನು ಮಂಡ್ಯದ ಕಿರಗಂದೂರಿನಲ್ಲಿ ಸುಮಾರ 25 ವರ್ಷಗಳ ಕಾಲ ಸಿದ್ಧೇಗೌಡರ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಜೀತಕ್ಕೆ ಇದ್ದೆವು. ನಾನು ಮದುವೆಯಾದ ನಂತರ ಸಿದ್ಧೇಗೌಡ ರವರ ಮನೆಯಲ್ಲಿ ಹೋಗಿರುತ್ತೇವೆ ಎಂದರೆ ಸರಿ. ನನ್ನ ಮದುವೆಯನ್ನು ನನ್ನ ತಂದೆಯವರೇ ಮಾಡಿರುತ್ತಾರೆ. ಮದುವೆಯಾದ ಒಂದು ವರ್ಷಕ್ಕೆ ನಾವು ಸಿದ್ದೇಗೌಡ ರವರ ಮನೆಗೆ ಹೋಗಿರುತ್ತೇವೆ. ನಾನು ಮದುವೆಯಾಗಿ ಸಿದ್ಧೇಗೌಡರ ಮನೆಗೆ ಹೋಗುವವರೆವಿಗೂ ನನಗೆ ಸಿದ್ಧೇಗೌಡ ಯಾರು ಎಂದು ಗೊತ್ತಿರಲಿಲ್ಲ. ಸಿದ್ಧೇಗೌಡರ ತಂದೆ ಹೆಸರು ಗೆಂಡೇಗೌಡ ಅವರು ಸಹ

ಕಿರಗಂದೂರು ಗ್ರಾಮದವರಾಗಿರುತ್ತಾರೆ. ಸಿದ್ಧೇಗೌಡ ರವರು ಕ್ರಷರ್ ಇಟ್ಟಿದ್ದು ಬೆಲ್ಲದ ಗಾಣವನ್ನು ಸಹ ಮಾಡಿಸುತ್ತಿದ್ದರು. ನನಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಮಕ್ಕಳಿಗೆ 5-6 ನೇ ತರಗತಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿಸಿರುತ್ತೇನೆ. ನನಗೆ ಬರುತ್ತಿದ್ದ ಆದಾಯ ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಿದ್ದೇಗೌಡ ರವರು ನನಗೂ, ನನ್ನ ಹೆಂಡತಿಗೂ ಸೇರಿ ರೂ.300/- ಗಳನ್ನು ಕೊಡುತ್ತಿದ್ದು, ಅದರಲ್ಲಿ ಅರ್ಧ ಖರ್ಚು ಮಾಡಿ, ಅರ್ಧಹಣವನ್ನು ಉಳಿಸುತ್ತಿದ್ದೆವು.

4. ನನ್ನ ವಿವಾಹವನ್ನು ಸಿದ್ದೇಗೌಡ ರವರೇ ಮಾಡಿರುತ್ತಾರೆ ಎಂದು ನನ್ನ ತಕರಾರಿನಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ಸಿದ್ದೇಗೌಡ ರವರು ಯಾವ ಊರಿನವರು ಎಂದು ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಸಿದ್ದೇಗೌಡ ರವರು ನನಗೊ, ನನ್ನ ಹೆಂಡತಿಗೂ ಸೇರಿ ತಿಂಗಳಿಗೆ ರೂ.100/- ಗಳನ್ನು ಕೊಡುತ್ತಿದ್ದರು. ಸದರಿ ಹಣದಲ್ಲಿ ನನ್ನ ಹೆಂಡತಿ ರೂ.50/- ಗಳನ್ನು ಉಳಿತಾಯ ಮಾಡುತ್ತಿದ್ದರು. ಸದರಿ ವಿಚಾರವನ್ನು ನನ್ನ ತಕರಾರಿನಲ್ಲಿ ತಿಳಿಸಿರುವುದಿಲ್ಲ. ನಾನು ಮದುವೆಯಾಗುವ ಮುಂಚೆ ನಮ್ಮ ಗ್ರಾಮದಲ್ಲಿ ಬೇರೆ ಬೇರೆ ಕೂಲಿ ಕೆಲಸ ಮಾಡುತ್ತಿದ್ದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಆ ಸಮಯ ನಾವೆಲ್ಲರೂ ಒಟ್ಟಿಗೆ ಇದ್ದೇವು. ಆ ಸಮಯ ನಾನು ದುಡಿದ ಹಣವು ನಮ್ಮ ಊಟಕ್ಕೆ ಆಗುತ್ತಿತ್ತು. ನನ್ನ

ಮತ್ತು ನನ್ನ ಸಹೋದರರೆಲ್ಲರ ಮದುವೆಯನ್ನು ಮಾಡಿದ ನಂತರ ನನ್ನ ತಂದೆಯವರು ಮೃತಪಟ್ಟಿರುತ್ತಾರೆ. ಸಣ್ಣಶೆಟ್ಟಿ ನನಗಿಂತ 15 ವರ್ಷ ಚಿಕ್ಕವರು. ನನ್ನ ಮದುವೆಯಾದ ಸುಮಾರು 20 ವರ್ಷಗಳ ನಂತರ ನನ್ನ ತಂದೆಯವರು ಮರಣ ಹೊಂದಿರುತ್ತಾರೆ. ನಾನು ನನ್ನ ತಂದೆಯವರ ಜೀವಿತಾವಧಿಯವರೆವಿಗೂ ಒಟ್ಟು ಕುಟುಂಬದಲ್ಲಿಯೇ ವಾಸ ಇದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮದುವೆಯಾದ ನಂತರ ನನ್ನ ಹೆಂಡತಿಯೊಂದಿಗೆ ನಾನು ಕೆಲಸಕ್ಕೆ ಹೊರಟಿರುತ್ತೇನೆ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**